ಮಂಗಳೂರು ವಿಶ್ವವಿದ್ಯಾನಿಲಯ

೧೪೦೪ (೧೯೪೧) ಶ್ರೀ ಬಿ. ಎ. ಇದಿನಬ್ಬ (ಉಳ್ಳಾಲ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಳೆದ ಮೂರು ವರ್ಷಗಳಿಂದ ೧೯೮೮ನೇ ಮಾರ್ಚ್‌ವರೆಗೆ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಮಾಡಿದ ವೆಚ್ಚವೆಷ್ಟು, ಹಾಗೂ ಇನ್ನು ಮುಂದೆ ಮಾಡಲಿರುವ ವೆಚ್ಚದ ಯೋಜನೆಗಳು ಯಾವುದು ?

ಆ) ಸದರಿ ಯೋಜನೆಗಳು ಪ್ರಾರಂಭವಾಗುವುದು ಯಾವಾಗ ?

ಇ) ಈವರೆಗೆ ಆಗಿರುವ ವೆಚ್ಚದ ಕಾರ್ಯಗಳು ಸಮರ್ಪಕವಾಗಿವೆಯೇ ಎಂದು ಪರಿಶೀಲನೆ ನಡೆದಿದೆಯೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಕಟ್ಟಡಗಳ ಬಗ್ಗೆ ಸುಮಾರು ರೂ. ೪, ೧೩, ೪೨, ೪೫೨-೦೦ ವೆಚ್ಚ ಮಾಡಲಾಗಿದೆ ಹಾಗೂ

೧)	ಗ್ರಂಥಾಲಯದ ಕಟ್ಟಡ ರೂ. ಅಂದಾಜು ವೆಚ್ಚ	೧೧೦.೦೦ ಲಕ್ಷಗಳು
೨)	ವಿದ್ಯಾರ್ಥಿ ಭವನದ ಅಂದಾಜು ವೆಚ್ಚ ರೂ.	೧೬.೦೦ ಲಕ್ಷಗಳು

ಆ) ಗ್ರಂಥಾಲಯ ಕಟ್ಟಡ ಕಟ್ಟಲು ಮಂಜೂರಾತಿಯಾಗಿದ್ದು, ಕೆಲಸವನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಇವರಿಗೆ ಒಪ್ಪಿಸಲಾಗಿದೆ. ವಿದ್ಯಾರ್ಥಿ ಭವನದ ಕಟ್ಟಡವನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುವುದು.

ಇ) ಈವರೆಗೆ ವಿಶ್ವವಿದ್ಯಾನಿಲಯದ ವೆಚ್ಚಗಳ ಬಗ್ಗೆ ವಿಶ್ವವಿದ್ಯಾನಿಲಯದ ಸರಕಾರಿ ಲೆಕ್ಕ ಪರಿಶೋಧಕರ ಲೆಕ್ಕ ಪರಿಶೀಲನೆ ಆಗಿರುವುದಿಲ್ಲ. ಅದು ಆದನಂತರ ಈ ಅಂಶ ಗೊತ್ತಾಗುತ್ತದೆ.

ಶಾಲೆಗಳಲ್ಲಿ ಖಾಲಿ ಇರುವ ಭೋಧಕರ ಹುದ್ದೆಗಳು

೧೪೦೫ (೧೯೪೦) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೮ನೇ ಮಾರ್ಚ್ ಕೊನೆಯವರೆಗೆ ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಖಾಲಿ ಇದ್ದ ಭೋಧಕರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು ?

ಆ) ಸದರೀ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ೧೯೮೮ನೇ ಮಾರ್ಚ್ ಕೊನೆಯವರೆಗೆ ಖಾಲೀ ಇದ್ದ ಭೋಧಕರ ಸಂಖ್ಯೆ.

ಸರ್ಕಾರೀ ಪ್ರಾಥಮಿಕ ಶಾಲೆಗಳು.	ಸರ್ಕಾರೀ ಪ್ರೌಢಶಾಲೆಗಳು
೪೯೦೭	೧೦೪೪

(ಜಿಲ್ಲಾವಾರು ಹುದ್ದೆಗಳ ಮಾಹಿತಿ ಲಗತ್ತಿಸಿದೆ)

ಅ) ಖಾಲೀ ಇರುವ ಹುದ್ದೆಗಳನ್ನು ತುಂಬಲು ಈಗಾಗಲೇ ನೇಮಕಾತಿ ಸಮಿತಿಗಳನ್ನು ರಚಿಸಲಾಗಿದ್ದು, ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲನೆಯೂ ನಡೆದಿದೆ. ಸಂದರ್ಶನಗಳನ್ನು ಕೂಡಲೇ ನಡೆಸಿ ಭರ್ತಿ ಮಾಡಲು ನಿರ್ದೇಶನ ನೀಡಲಾಗಿದೆ.

ಆ) ಪ್ರಶ್ನೆ 'ಅ' ಗೆ ಕೊಟ್ಟಿರುವ ಉತ್ತರವೇ ಈ ಪ್ರಶ್ನೆಗೂ ಅನ್ವಯಿಸುತ್ತದೆ.
ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರುಗಳ ಹುದ್ದೆಗಳು ಜಿಲ್ಲಾವಾರು ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು.	ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ:	ಪ್ರೌಢ ಶಾಲಾ ಶಿಕ್ಷಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ:
೧	ಬೆಂಗಳೂರು ಗ್ರಾ. ಜಿಲ್ಲೆ.	೩೧೦	೬೭
೨	ಬೆಂಗಳೂರು ದಕ್ಷಿಣ ಜಿಲ್ಲೆ	—	೫೪
೩	ಚಿತ್ರದುರ್ಗ	೨೨೮	೬೮
೪	ಕೋಲಾರ	೩೦೦	೮೯
೫	ಶಿವಮೊಗ್ಗ	೨೫೫	೪೮
೬	ತುಮಕೂರು	೩೪೨	೮೦
೭	ಮೈಸೂರು	೩೫೫	೩೧
೮	ಮಂಡ್ಯ	೩೨೬	೫೯
೯	ದಕ್ಷಿಣ ಕನ್ನಡ	೧೫೦	೪೨
೧೦	ಹಾಸನ	೨೨೦	೪೫
೧೧	ಚಿಕ್ಕಮಗಳೂರು	೨೦೦	೬೧
೧೨	ಕೊಡಗು	೮೬	೬೨
೧೩	ಬೆಳಗಾಂ	೩೭೪	೩೧
೧೪	ಬಿಜಾಪುರ	೩೧೬	೨೪
೧೫	ಧಾರವಾಡ	೪೧೦	೨೬
೧೬	ಉತ್ತರ ಕನ್ನಡ	೧೪೬	೨೭
೧೭	ಗುಲ್ಬರ್ಗ	೨೧೨	೩೫
೧೮	ರಾಯಚೂರು	೨೫೬	೩೭
೧೯	ಬಳ್ಳಾರಿ	೧೬೧	೩೪
೨೦	ಬೀದರ್	೧೬೦	೪೨
೨೧	ಬೆಂಗಳೂರು ಉತ್ತರ	—	೪೨
	ಒಟ್ಟು	೪೮೦೭	೧೦೪೪

ಪದವಿಪೂರ್ವಕಾಲೇಜಿನ ಖಾಲಿ ಹುದ್ದೆಗಳ ಬಗ್ಗೆ

೧೪೦೬ (೨೬೫೨) ಶ್ರೀ ಕೆ. ವಸಂತ ಬಂಗೇರಾ (ಬೆಳ್ತಂಗಡಿ).—ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಬೆಳ್ತಂಗಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಳೆದ ಒಂದು ವರ್ಷದಿಂದ ಗುಮಾಸ್ತರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ವಿಚಾರವನ್ನು ಸರ್ಕಾರದ ಗಮನಕ್ಕೆ ಆಗಾಗ್ಗೆ ತಂದಿದ್ದರೂ ಇನ್ನೂ ಗುಮಾಸ್ತರನ್ನು ನೇಮಿಸದಿರಲು ಕಾರಣವೇನು ?